ಆ ದಿನ ನಾನೇ ಅವಳ ಮನೆಗೆ ಹೋಗಿದ್ದೆ. ಅವಳ ಮಗಳು ನಿಧಿ, 'ಅಮ್ಮಾ ವಾಸಂತಿ ಆಂಟಿ ಬಂದಿದ್ದಾರೆ ಬಾ' ಎಂದು ರೂಮಿಂದ ಕೈ ಹಿಡಿದು ಕರೆ ತಂದಿದ್ದಳು. ತುಂಬಾ ಬೇಸರದಲ್ಲಿದ್ದಳು. ನನ್ನನ್ನು ಕಂಡ ಕೂಡಲೇ ಅದ್ಯಾವ ಪರಿ ದುಃಖಿಸಿದಳೆಂದರೆ ನಾನು ಸಮಾಧಾನ ಮಾಡಿದಷ್ಟು ಅವಳ ದುಃಖ ಹೆಚ್ಚಾಗುತ್ತಿತ್ತು. ಅವಳ ತಂದೆ ಹಾರ್ಟ್ ಅಟ್ಯಾಕ್ ಆಗಿ ಹಾಸ್ಪಿಟಲ್‌ನಲ್ಲಿದ್ದಾರೆ ಅಂತ ಮೇಲ್ ಬಂದಿತ್ತು.

'ನೆನಪಾದ ಕೂಡಲೆ ಭಾರತಕ್ಕೆ ಹೋಗಿ ಬರಲು ಇದೇನು ಬೆಂಗಳೂರು ಮೈಸೂರಾ? ಅಷ್ಟಕ್ಕೂ ಏನಾಗಿದೆ ನಿಮ್ಮಪ್ಪಂಗೆ? ಆರಾಮಾಗೇ ಇದ್ದಾರಲ್ಲಾ? ಸಣ್ಣ ಪುಟ್ಟದ್ದಕ್ಕೆಲ್ಲಾ ಹೀಗಳ್ತಾ ಕೂತ್ರೆ ಮಕ್ಕಳಿಗೆ ಪರೀಕ್ಷೆ ಇದೆ. ಅವರ ಭವಿಷ್ಯದ ಪ್ರಶ್ನೆ. ನೀನು ಹೀಗಾಡಿದ್ರೆ ಮಕ್ಕಳು ಮೆಂಟಲಿ ವೀಕ್ ಆಗ್ತಾರೆ. ಅದರ ಇಫೆಕ್ಟ್ ಪರೀಕ್ಷೆ ಮೇಲಾಗುತ್ತೆ. ಅರ್ಥ ಮಾಡ್ಕೊ'– ಸಿಡಿಮಿಡಿಗುಟ್ಟುತ್ತಾ ತಿಂಡಿ ತಿಂದು ಆಫೀಸಿಗೆ ಹೋಗುವ ಮುನ್ನ ಗಂಡ ರೇಗಿದ್ದನ್ನು ಹೇಳಿ ನಮಿತಾ ಕಂಬನಿಗರೆದಿದ್ದಳು.

ಆ ಮನುಷ್ಯನಿಗೆ ದುಡ್ಡಿನ ವ್ಯಾಮೋಹ, ಅವನು ವಿದೇಶಕ್ಕೆ ಬಂದದ್ದೇ ದುಡ್ಡು ಸಂಪಾದನೆ ಮಾಡೋದಿಕ್ಕೆ. ತನ್ನ ವಿನಃ ಬೇರೆಯವರಿಗೆ ದುಡ್ಡಿನ ಮಹತ್ವಾನೆ ಗೊತ್ತಿಲ್ಲದೋರ ಥರ ಆಡ್ತಿದ್ದ. ವೀಕೆಂಡ್ ಬಂದ್ರೆ ಹೆಂಡತಿ ಮಕ್ಕಳನ್ನು ಕರೆದು ಕೊಂಡು ಹೊರಗೆ ಹೋದ ಪ್ರಾಣಿನೆ ಅಲ್ಲ. ಮನೇಲಿದ್ದ ಅಷ್ಟೂ ಹೊತ್ತು ಲ್ಯಾಪ್‌ಟಾಪ್‌ನಲ್ಲೇ ಮುಖವಿರಿಸಿಕೊಂಡು ಕೂಡುತ್ತಿದ್ದ.

ಮಕ್ಕಳಿಗೂ ಅಷ್ಟೆ, ಏನಾದರೂ ತೆಗೆಸಿಕೊಟ್ರೆ ಅಷ್ಟು ಖರ್ಚಾಯ್ತು, ಇಷ್ಟು ಖರ್ಚಾಯ್ತು. ನಿಮಗೆ ಕಷ್ಟ ಅನ್ನೋದೆ ಗೊತ್ತಿಲ್ಲ. ನಾನು ಸಂಪಾದನೆ ಮಾಡಿ ತರ್ತೀನಲ್ಲಾ, ನಿಮಗ್ಹೇಗೆ ಗೊತ್ತಾಗ್ಬೇಕು? ನಿಮ್ಮಮ್ಮ ಅಂತೂ ಯಾವುದಕ್ಕೂ ತಲೆ ಬಿಸಿ ಮಾಡ್ಕೊಳಲ್ಲ. ಅವಳಿಗೇನು? ಮನೇಲಿ ಯಾವುದಕ್ಕೆ ಕಡಿಮೆ ಮಾಡಿದೀನಿ ನಾನು? ಅವಳಿಗೆ ಹೊರಗೆ ಹೋಗಿ ದುಡಿದಿದ್ರೆ ಕಷ್ಟ ಏನೂಂತ ತಿಳಿದಿರೋದು. ನಾನು ಓದೋವಾಗ ಒಂದ್ಹೊತ್ತು ಊಟಕ್ಕೂ ಪರದಾಡಿದೀನಿ ಗೊತ್ತಾ? ಆಗ ಬಂಧು, ಬಳಗದವರು ಯಾರೂ ಸರಿಯಾಗಿ ಮಾತೂ ಆಡಿಸ್ತಿರಲಿಲ್ಲ, ಅದೇ ಈಗ ನೋಡು, ವಿದೇಶದಲ್ಲಿದೀನಿ ಅಂತ ಹೇಗೆ ಗೌರವ ಕೊಡ್ತಾರೆ? ಅದಕ್ಕೇನೆ, ದುಡ್ಡಿದ್ರೆ, ಅಷ್ಟೆ ಮನುಷ್ಯನಿಗೆ ಪ್ರಪಂಚದಲ್ಲಿ ಬೆಲೆ ಇರೋದು. ನೀವು ಪುಣ್ಯ ಮಾಡಿದೀರ, ಮುಂದೆ ನಿಮ್ಮ ಕಾಲ ಮೇಲೆ ನಿಂತ್ಕೊಂಡು ದುಡ್ಡು ಸಂಪಾದನೆ ಮಾಡ್ತೀರಲ್ಲ ಆಗ ಜೀವನ ಅಂದ್ರೆ ಏನೂ ಅಂತ ಗೊತ್ತಾಗೋದು.

ಹೀಗೇ ಪ್ರತಿ ಸಲವೂ ಏನಾದರೂ ಹೆಂಡತಿ ಮಕ್ಕಳು ಸಣ್ಣ ಪುಟ್ಟ ಬೇಡಿಕೆ ಇಟ್ಟರೂ ಅವನಿಂದ ದೊಡ್ಡ ದೊಡ್ಡ ದುಡ್ಡಿನ ಪುರಾಣವನ್ನೇ ಕೇಳಬೇಕಿತ್ತು. ಎಲ್ಲರ ಮುಖದ ಮೇಲೆ ಹೊಡೆದಂತೆ ಶ್ರೀಮಂತನಾಗಬೇಕೆಂಬಾಸೆ. ಅದಾಗಲೇ ಸಿಲಿಕಾನ್ ಸಿಟಿಯಲ್ಲಿ ದೊಡ್ಡ ಮನೆ ಕೊಂಡಾಗಿತ್ತು. ಹಗಲು ರಾತ್ರಿಯನ್ನದೇ ವಿಶ್ರಾಂತಿ ಬಯಸದೆ ದುಡಿಯುತ್ತಿದ್ದ. ಚಿಕ್ಕ ಪುಟ್ಟ ಸಂತೋಷಗಳನ್ನು ಅನುಭವಿಸುವ ಮಕ್ಕಳ ಆಸೆಗಳು ಮರೀಚಿಕೆಯಾಗಿಯೇ ಉಳಿಯುತ್ತಿದ್ದವು.

ತನ್ನ ತಮ್ಮನ ಮದುವೆಗೆಂದು ಕೇವಲ ಒಂದು ವಾರವಷ್ಟೆ ರಜೆ ಹಾಕಿ ಸಂಸಾರ ಸಮೇತನಾಗಿ ಊರಿಗೆ ಬಂದಿದ್ದ. ಇನ್ನೊಂದು ವಾರ ಇದ್ದರೆ ತವರಿನಲ್ಲಿ ಉಳಿಯಬಹುದಿತ್ತು. ಬರುವುದೇ ಅಪರೂಪ ಎಂದು ಗೊಣಗಿದ್ದಳು ನಮಿತಾ. ಕೇಳಿಸಿಯೂ  ಕೇಳದವರಂತೆ ಸುಮ್ಮನಿದ್ದ ಪತಿರಾಯನ ಮೇಲೆ ಸಿಟ್ಟು ಬಂದಿತ್ತು.

ಮೈದುನನ ಮದುವೆಯಾದ ಮಾರನೆ ದಿನವೇ ಅತ್ತೆ, ಮಾವಂದಿರಿಗೆ ರಜೆಯ ವಿಷಯ ಹೇಳಿ ಮಕ್ಕಳನ್ನು ಕರೆದು ಕೊಂಡು ತವರಿಗೆ ಬಂದಿದ್ದಳು. ಅಪ್ಪ ಮೊದಲಿನಂತೆ ಲವಲವಿಕೆಯಲ್ಲಿದ್ದಂತೆ ತೋರಲಿಲ್ಲ. ಮೊಮ್ಮಕ್ಕಳೊಂದಿಗೆ ಮಗುವಾಗಿ ಬೆರೆತ ಅಪ್ಪನನ್ನು ಆರೋಗ್ಯದ ಬಗ್ಗೆ ವಿಚಾರಿಸುವುದು ಬೇಡವೆನ್ನಿಸಿ ಅಮ್ಮನೊಟ್ಟಿಗೆ ಅಡುಗೆ ಮನೆಗೆ ಹೋದಳು. ನಿಮ್ಮಪ್ಪಂಗೆ ಹಾರ್ಟ್ ಆಪರೇಶನ್ ಆಗಬೇಕಂತೆ ಎಂದು ಅಮ್ಮ ಬೇಸರದಿಂದ ಹೇಳಿದ್ದು ಕೇಳಿ ಆಘಾತವಾಯ್ತು.

ಅಕ್ಕ ಪಕ್ಕದವರಿಗೆಲ್ಲಾ ಇವಳನ್ನು ಮಾತನಾಡಿಸುವ ಹಂಬಲ. ನಾವೆಲ್ಲ ನಿನಗೆ ಕಾಣಿಸುವುದಿಲ್ವೇನೋ, ವಿದೇಶಕ್ಕೆ ಹಾರಿ ನಮ್ಮನ್ನೆಲ್ಲಾ ಮರ್ತಿದೀಯಾ ಎಂತಲೇ ಮಾತು ಆರಂಭಿಸುತ್ತಿದ್ದರು. ಎಲ್ಲರೂ ಅವಳ ಐಷಾರಾಮಿ ಜೀವನದ ಬಗ್ಗೆ ಕೇಳುವವರೆ. ಎಲ್ಲದಕ್ಕೂ ನಗುತ್ತಲೇ ಪ್ರತಿಕ್ರಿಯಿಸುತ್ತಿದ್ದ ನಮಿತಾ ಒಳಗೊಳಗೆ ವಿಷಾದದ ನಗೆ ಬೀರುತ್ತಿದ್ದಳು. ಇವರಿಗೇನು ಗೊತ್ತು 'ದೂರದ ಬೆಟ್ಟ ಕಣ್ಣಿಗೆ ನುಣ್ಣಗೆ' ಅಲ್ಲವೇ?

ತವರಿನಲ್ಲಿ ಕಳೆದ ನಾಲ್ಕು ದಿನಗಳು ನಾಲ್ಕು ಕ್ಷಣದಂತೆ ಅನ್ನಿಸಿತ್ತು. ಹೊರಡುವ ಹಿಂದಿನ ರಾತ್ರಿ ಅಪ್ಪನ ಪಕ್ಕ ಊಟಕ್ಕೆ ಕುಳಿತಾಗ ಸ್ವಾಭಿಮಾನಿ ಅಪ್ಪ ತುಂಬಾ ಮುಜುಗರ ಪಡುತ್ತಲೇ ಆಪರೇಶನ್‌ಗಾಗಿ 2 ಲಕ್ಷ ಕಳಿಸುವಂತೆ ಕೇಳಿದ್ದರು. 'ನನ್ನ ಪೆನ್ಶನ್ ದುಡ್ಡು ಬಂದ ಕೂಡಲೇ ವಾಪಸ್ ಕೊಡ್ತೇನೆ' ಎಂದರು.

'ಅಯ್ಯೋ, ವಾಪಸ್ ಕೊಡುವ ಮಾತೆಲ್ಲಾ ಯಾಕಪ್ಪ, ನಾನು ಇವರ ಹತ್ರ ಮಾತಾಡ್ತೀನಿ, ನೀವೇನೂ ಕಾಳಜಿ ಮಾಡ್ಬೇಡಿ. ನಿಮ್ಮ ಆರೋಗ್ಯದ ಕಡೆ ಗಮನ ಕೊಡಿ' ಎಂದಳು. ರಾತ್ರಿಯಿಡೀ ನಿದ್ರೆ ಬರಲಿಲ್ಲ. 2 ಲಕ್ಷ ಕೊಡುವುದೇನು ಇವರಿಗೆ ದೊಡ್ಡದಲ್ಲ. ಮದುವೆಯಾಗಿ ಹತ್ತು ವರ್ಷಗಳಾದರೂ ನಾನು ಇದುವರೆಗೂ ನನಗಾಗಲಿ, ನನ್ನ ತವರಿನವರಿಗಾಗಲಿ ದೊಡ್ಡ ಮೊತ್ತದ ಬೇಡಿಕೆ ಇಟ್ಟವಳೇ ಅಲ್ಲ. ಆದರೂ ಕೇಳಲು ಭಯ, ತಡ ಮಾಡುವ ಹಾಗಿಲ್ಲ.

ಒಂದು ದಿನ ಧೈರ್ಯ ಮಾಡಿ ಸಮಯ ನೋಡಿಕೊಂಡು ಗಂಡನ ಬಳಿ ಅಪ್ಪನ ಆರೋಗ್ಯದ ವಿಷಯ ಮಾತನಾಡುತ್ತಾ ದುಡ್ಡಿನ ಪ್ರಸ್ತಾಪವಿಟ್ಟಳು.

'ನಾನೇನು ದುಡ್ಡಿನ ಮರಾನಾ ನೆಟ್ಟಿದೀನಿ? 2 ಲಕ್ಷ ಅಂದ್ರೆ ಏನೂಂತ ತಿಳ್ಕೊಂಡಿದಿಯಾ? ಅಷ್ಟು ದುಡ್ಡು ಸಂಪಾದನೆ ಮಾಡೋದಿಕ್ಕೆ ನಾನೆಷ್ಟು ಕಷ್ಟ ಪಡ್ತೀನೀಂತ ಗೊತ್ತಾ ನಿನಗೆ? ನಿನಗೊತ್ತಿದ್ರೆ ಹೀಗೆ ನನ್ನ ಕೇಳ್ತಾ ಇರಲಿಲ್ಲ ನೀನು. ಹತ್ತೊ, ಇಪ್ಪತ್ತೋ ಸಾವಿರ ಆಗಿದ್ರೆ ವಿಚಾರ ಮಾಡ್ಬಹುದಿತ್ತು. ನೀನು ಹೊರಗಡೆ ಹೋಗಿ ಸಂಪಾದನೆ ಮಾಡಿದ್ರೆ ತಿಳಿದಿರೋದು. ಮನೇಲೆ ಹಾಯಾಗಿದೀಯಲ್ಲ ನಿನಗ್ಹೇಗೆ ಗೊತ್ತಾಗತ್ತೆ ದುಡ್ಡಿನ ಬೆಲೆ?' ಎನ್ನುತ್ತಾ ಟೈ ಸರಿಪಡಿಸಿಕೊಂಡು ಹೊರ ನಡೆದುಬಿಟ್ಟ ನಿರ್ಭಾವುಕ ಗಂಡ. ಬಿಕ್ಕಿ ಬಿಕ್ಕಿ ಅತ್ತರೂ ಎದೆ ಭಾರ ಕಡಿಮೆಯಾಗಲಿಲ್ಲ. ಅಪ್ಪನ ಮುಖ ಕಣ್ಣೆದುರು ಬಂದಂತಾಗಿ ತನ್ನ ಬಾಲ್ಯದ ದಿನಗಳು ನೆನಪಾದವು.

ಅದೊಂದು ದಿನ ಶಾಲೆಯಿಂದ ಬಿಸಿಲಿನಲ್ಲಿ ನಡೆದು ಬಂದದ್ದಕ್ಕೇನೋ ಕಣ್ಣಿಗೆ ಕತ್ತಲು ಕವಿದಂತಾಗಿ ಬಿದ್ದುಬಿಟ್ಟಿದ್ದಳು. ಒಳಗಿದ್ದ ಅಪ್ಪ ದಡಬಡಾಯಿಸಿ ಬಂದಿದ್ದರು. ಅವಳನ್ನೆತ್ತಿಕೊಂಡು ಆಸ್ಪತ್ರೆಗೆ ಓಡಿದ್ದರು. ಅವರು ಗಾಬರಿಯಾದದ್ದನ್ನು ಕಂಡು ವೈದ್ಯರು ನಕ್ಕಿದ್ದರು. ಮತ್ತೊಂದು ದಿನ ಹೋಂ ವರ್ಕ್ ಮಾಡದೆ ಇದ್ದದ್ದಕ್ಕೆ ಟೀಚರ್ ಹೊಡೆದ ನೆಪವಾಗಿ ಕಾಲು ನೋವು ಬಂದು ಜ್ವರ ಬಂದಿತ್ತು. ಆಗಂತೂ ಮಗಳ ಹಾಸಿಗೆ ಪಕ್ಕದಲ್ಲಿಯೇ ಕುಳಿತು ಪದೇ ಪದೇ ಹಣೆಗೆ ತಣ್ಣೀರಿನ ಪಟ್ಟಿ ಹಾಕುತ್ತಾ ಕುಳಿತು ಬಿಟ್ಟಿದ್ದರು.

ಶಾಲೆಯಲ್ಲಿ ಯಾವುದಾದರೂ ಸ್ಪರ್ಧೆಯಲ್ಲಿ ಬಹುಮಾನ ತಂದರೆ ತಾವೇ ವಿಜೇತರಾದಷ್ಟು ಸಂತೋಷ ಪಡುತ್ತಿದ್ದರು. ಸಂಗೀತ, ಕಂಪ್ಯೂಟರ್ ಅಂತೆಲ್ಲಾ ಯಾವ ಕೋರ್ಸ್‌ಗೆ ಸೇರಿದರೂ ನಿರಾಕರಿಸದೆ ಫೀಸು ಕೊಡುತ್ತಿದ್ದರು. ಅಷ್ಟೇನೂ ಶ್ರೀಮಂತಿಕೆ ಇರದಿದ್ದರೂ ಅಮ್ಮನ ಅಚ್ಚುಕಟ್ಟಿನ, ಶಿಸ್ತಿನ, ಜಾಣತನದ ನಿರ್ವಹಣೆಯಿಂದ ಯಾವುದಕ್ಕೂ ಕೊರತೆ ಇರಲಿಲ್ಲ. ಏರುಪೇರುಗಳಿಲ್ಲದ ನೆಮ್ಮದಿಯ ದಿನಗಳವು. ಕಾಲೇಜು ಶಿಕ್ಷಣ ಮುಗಿಯುತ್ತಿದ್ದಂತೆ ಅಪ್ಪ ಬಹಳ ಮುತುವರ್ಜಿಯಿಂದ ವರಾನ್ವೇಷಣೆಗೆ ತೊಡಗಿದ್ದರು.

ತಾವೇ ಖುದ್ದಾಗಿ ಹೋಗಿ ಹುಡುಗನ ಮನೆಯ ಬಗ್ಗೆ ಕೆಲಸದ ಬಗ್ಗೆ ವಿಚಾರಿಸಿ ಬರುತ್ತಿದ್ದರು. ಸಂಬಂಧಿಯೊಬ್ಬರು ಫೋನು ಮಾಡಿ ಜಾತಕ ಕೂಡಿ ಬಂದಿದೆ. ಫೋಟೋ ಕೂಡ ನೋಡಿದ್ದಾರೆ. ಹುಡುಗಿಯನ್ನು ನೋಡಲು ಬರುತ್ತಾರಂತೆ. ಎಲ್ಲಾ ಸಿದ್ಧತೆ ಮಾಡಿಕೊಳ್ಳಿ ಎಂದರು. ಅಪ್ಪ ಹುಡುಗ ಏನ್ಮಾಡ್ಕೊಂಡಿದ್ದಾನೆ? ಎಂದದಕ್ಕೆ ಆ ಕಡೆಯಿಂದ ಹೊಗಳಿಕೆಯ ಮಹಾಪೂರವೇ ಹರಿದು ಬಂದಿತ್ತು. ಒಂದೇ ಮಾತಿನಲ್ಲಿ ಹೇಳುವುದಾದರೆ ಹುಡುಗ 'ಲಾಖೋಂ ಮೇಂ ಏಕ್' ಎಂದಿದ್ದರು. ಅಪ್ಪನಿಗೆ ಖುಷಿಯಿಂದ ಕಣ್ಣಲ್ಲಿ ನೀರು ಬಂದಿತ್ತು. ಹುಡುಗನ ಕಡೆಯವರು ಹುಡುಗಿಯನ್ನು ಒಪ್ಪಿದ್ದೇವೆ ಎಂದು ಹೇಳಿ ಕಳಿಸುವುದರ ಜೊತೆಗೆ ಒಂದಷ್ಟು ಡಿಮಾಂಡುಗಳನ್ನು ಇಟ್ಟಿದ್ದರು.

ಮಗಳು ಸುಖವಾಗಿರುತ್ತಾಳಲ್ಲಾ ಎಂಬ ಸಂತೋಷದಲ್ಲಿ ಅಪ್ಪ ಎಲ್ಲದಕ್ಕೂ ಒಪ್ಪಿಗೆ ಸೂಚಿಸಿದ್ದರು. ಅಮ್ಮ, 'ಅವರು ಹೇಳಿದ್ದಕ್ಕೆಲ್ಲಾ ಹೂಂ ಅಂದು ಬಂದಿರಲ್ಲಾ, ಅಷ್ಟೊಂದು ದುಡ್ಡು ಹೇಗೆ ಹೊಂದಿಸ್ತೀರಿ?' ಎಂದು ರೇಗಿದ್ದಳು. ಮಗಳ ಮದುವೆಗಾಗಿ ಇದ್ದ ಅಲ್ಪ ಜಮೀನನ್ನೂ ಮಾರಿದ್ದರು ಅಪ್ಪ. ಮದುವೆ ಯಾವ ಕುಂದು ಕೊರತೆಯೂ ಇರದೆ ಅದ್ದೂರಿಯಾಗಿ ನೆರವೇರಿತು. ಹೆಣ್ಣೊಪ್ಪಿಸುವ ಸಮಯದಲ್ಲಿ ಅಪ್ಪ ಮಗಳನ್ನು ತಬ್ಬಿಕೊಂಡು ಮಗುವಿನಂತೆ ಬಿಕ್ಕಿದ್ದರು. ಎಲ್ಲವೂ ಕಣ್ಣೆದರು ಬಂದಂತಾಗಿ ದುಃಖ ಉಮ್ಮಳಿಸಿ ಬಂದಿತ್ತು.

ಕಾಲಿಂಗ್ ಬೆಲ್ಲಿನ ಸದ್ದಿಗೆ ಗಾಬರಿಯಿಂದ ಬಾಗಿಲು ತೆರೆಯಲು